## MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯಡಿಯಲ್ಲಿ ಬೀಜ ಸಂಸ್ಕರಣೆಯ ಮೂಲಸೌಕರ್ಯ ಅಭಿವೃದ್ಧಿಯ ಮಾರ್ಗಸೂಚಿ (Seed Processing Infrastructure)

ತೋಟಗಾರಿಕೆ ಬೆಳೆಗಳ ಬೀಜೋತ್ಪಾದನೆ ಮಾಡುವ ವ್ಯಕ್ತಿ / ಸಂಸ್ಥೆಗಳು ಹಲವು ಅಗತ್ಯತೆಯ ಮೂಲಭೂತ ಸೌಕರ್ಯಗಳನ್ನು ಹೊಂದುವ ಅವಶ್ಯಕತೆಯಿರುತ್ತದೆ. ಪ್ರಮುಖವಾಗಿ ಉತ್ಪಾದಿಸಿದ ಬೀಜಗಳನ್ನು ಸಂಸ್ಕರಿಸುವ ಮತ್ತು ಪ್ಯಾಕ್ ಮಾಡುವ ಹಾಗೂ ಸಂಗ್ರಹಿಸುವ ಮೂಲಭೂತ ಸೌಕರ್ಯಗಳ ಅಗತ್ಯತೆ ಇದ್ದು, ಇವುಗಳನ್ನು ನಿರ್ಮಿಸಲು ಹೆಚ್ಚು ಖರ್ಚು ತಗಲುತ್ತದೆ. ಇಂಥವರಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸದರಿ ಸಹಾಯಧನವನ್ನು ನೀಡಲಾಗುತ್ತಿದೆ.

**ಸಾರ್ವಜನಿಕ ವಲಯ :**

- ತರಕಾರಿ ಬೀಜೋತ್ಪಾದನೆ ಕಾರ್ಯಕ್ರಮವು ಪ್ರಸ್ತಾವನೆ ಆಧಾರಿತ (Project mode) ಕಾರ್ಯಕ್ರಮವಾಗಿರುತ್ತದೆ.
- ಸಾರ್ವಜನಿಕ ವಲಯದಲ್ಲಿ ತರಕಾರಿ ಬೀಜಗಳ ಉತ್ಪಾದನೆಗೆ / ಸಂಸ್ಕರಣೆಗೆ ಮೂಲ ಸೌಕರ್ಯ ಕಲ್ಪಿಸುವುದಕ್ಕೆ ಶೇ. 100 ರಷ್ಟು ಗರಿಷ್ಠ ರೂ. 200.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ.
- ತೋಟಗಾರಿಕೆ ಇಲಾಖೆ / ಕೃಷಿ ವಿಶ್ವವಿದ್ಯಾಲಯಗಳು / ಕೃಷಿ ಸಂಶೋಧನಾ ಸಂಸ್ಥೆಗಳು / ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಇತ್ಯಾದಿಗಳು ಈ ಮೂಲಭೂತ ಸೌಕರ್ಯಗಳನ್ನು ಸ್ಥಾಪಿಸಲು ಅರ್ಹವಾಗಿರುತ್ತವೆ.
- ಈ ಬಗ್ಗೆ ಸಂಬಂಧಿಸಿದ ಸಂಸ್ಥೆಯವರು ಪ್ರಸ್ತಾವನೆ ತಯಾರಿಸಿ ತೋಟಗಾರಿಕೆ ಉಪ ನಿರ್ದೇಶಕರ ಮೂಲಕ ನಿಯಮಾನುಸಾರ ಮಂಜೂರಾತಿಗಾಗಿ ಸಲ್ಲಿಸುವುದು.
- ಮಂಜೂರಾತಿ ನಂತರ ಸಮರ್ಪಕ ಹಾಗೂ ಸಮಯಾಧಾರಿತ ಯೋಜನಾನುಷ್ಠಾನವನ್ನು ಖಚಿತಪಡಿಸಲು ಸಂಬಂಧಿಸಿದ ಸಂಸ್ಥೆಯ ರೂ. 100/- ಛಾಪಾ ಕಾಗದದ ಮೇಲೆ ತೋಟಗಾರಿಕೆ ಇಲಾಖೆಯೊಡನೆ ಒಡಂಬಡಿಕೆ ಮಾಡಿಕೊಳ್ಳುವುದು.
- ಸಂಬಂಧಿತ ಸಂಸ್ಥೆಯು ಈ ಸಹಾಯಧನವನ್ನು ಉಪಯೋಗಿಸಿ ಮಂಜೂರಾದ ಯೋಜನಾ ಪ್ರಸ್ತಾವನೆಯಂತೆ ಮೂಲಭೂತ ಸೌಕರ್ಯಗಳ ನಿರ್ಮಾಣ ಕೈಗೊಳ್ಳುವುದು ಹಾಗೂ ಸಂಬಂಧಿಸಿದ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರುಗಳಿಗೆ ಛಾಯಾ ಚಿತ್ರಗಳ ಸಮೇತ ಸಮಗ್ರ ವರದಿಯನ್ನು ಸಲ್ಲಿಸುವುದು.
- ಸಂಬಂಧಿಸಿದ ತಾಲ್ಲೂಕು / ಜಿಲ್ಲೆಯ ಅಧಿಕಾರಿಗಳು ಮೂಲಭೂತ ಸೌಕರ್ಯಗಳ ನಿರ್ಮಾಣದ ಅವಧಿಯಲ್ಲಿ ಸಂಬಂಧಿಸಿದ ಸಂಸ್ಥೆಯ ಘಟಕಗಳಿಗೆ ಭೇಟಿ ನೀಡಿ, ಪರಿಶೀಲಿಸಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವುದು.
- ಸಂಬಂಧಿಸಿದ ಸಂಸ್ಥೆಯು ಅನುಮೋದಿತ ಯೋಜನಾ ವರದಿಯಲ್ಲಿ ವಿವರಿಸಿದಂತೆ ಹಾಗೂ ಸೂಚಿತ ಸಮಯದಲ್ಲಿ ನಿರ್ಮಾಣಗಳನ್ನು ಕೈಗೊಳ್ಳಲು ವಿಫಲರಾದಲ್ಲಿ ಆ ಸಂಸ್ಥೆಗೆ ಪಾವತಿಸಿರುವ ಸಹಾಯಧನವನ್ನು ಪಾವತಿಸಿದ ದಿನಾಂಕದಿಂದ ರಾಷ್ಟ್ರೀಕೃತ ಬ್ಯಾಂಕ್ ಗಳು ವಿಧಿಸುವ ಬಡ್ಡಿ ದರದಲ್ಲಿ ಲೆಕ್ಕಹಾಕಿ ಒಂದೇ ಕಂತಿನಲ್ಲಿ ಅಸಲು ಮತ್ತು ಬಡ್ಡಿ ಸೇರಿಸಿ ವಾಪಸ್ಸು ಪಡೆಯುವುದು. ಈ ಅಂಶವು ಒಡಂಬಡಿಕೆಯಲ್ಲಿ ಸ್ಪಷ್ಟವಾಗಿರತಕ್ಕದ್ದು.

(216)

**ಖಾಸಗಿ ವಲಯ :**

- ಖಾಸಗಿ ವಲಯದಲ್ಲಿ ವ್ಯಕ್ತಿ / ಸಂಸ್ಥೆಗಳಿಗೆ ತರಕಾರಿ ಬೀಜಗಳ ಉತ್ಪಾದನೆಗೆ / ಸಂಸ್ಕರಣೆಗೆ ಮೂಲ ಸೌಕರ್ಯ ಕಲ್ಪಿಸುವುದಕ್ಕೆ ಶೇ. 50 ರಷ್ಟು ಸಹಾಯಧನ ನೀಡಲಾಗುತ್ತದೆ.
- ಘಟಕದ ನಿರ್ಮಾಣಕ್ಕೆ RBI ಅನುಮೋದಿತ online banking (IFSC code, RTGS, NEFT ಇತರೆ) ಸೌಲಭ್ಯವನ್ನು ಹೊಂದಿರುವ ಬ್ಯಾಂಕಿನಿಂದ ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ. ಸಾಲ ಪಡೆದಿರುವ ಕುರಿತು, ಮಂಜೂರಾತಿ ಪತ್ರ ಹಾಗೂ **appraisal letter** ನೀಡುವುದು. ಸದರಿ ಕಾರ್ಯಕ್ರಮವು "credit Linked back ended subsidy" ಆಗಿದ್ದು ದೀರ್ಘಾವಧಿ ಸಾಲ (Term Loan) ಮಂಜೂರಾಗಿರಬೇಕು. ಅಗ್ರಿಇನ್ಫ್ರಾಸ್ಟ್ರಕ್ಚರ್ ಫಂಡ್ ಯೋಜನೆಯಡಿ 200 ಲಕ್ಷಗಳವರೆಗಿನ ಸಾಲಕ್ಕೆ ಶೇ.3 ರ ಬಡ್ಡಿಯ ಕಡಿತವಿದ್ದು, ಫಲಾನುಭವಿಗಳಿಗೆ ಈ ಸವಲತ್ತನ್ನು ಪಡೆಯಲು ಮಾಹಿತಿ ನೀಡಿ ನೆರವಾಗುವುದು.
- ಈ ಬಗ್ಗೆ ಸಂಬಂಧಿಸಿದ ಸಂಸ್ಥೆಯವರು ಪ್ರಸ್ತಾವನೆ ತಯಾರಿಸಿ ತೋಟಗಾರಿಕೆ ಉಪ ನಿರ್ದೇಶಕರ ಮೂಲಕ ನಿಯಮಾನುಸಾರ ಮಂಜೂರಾತಿಗಾಗಿ ಸಲ್ಲಿಸುವುದು.
- ಮಂಜೂರಾತಿ ನಂತರ ಸಮರ್ಪಕ ಹಾಗೂ ಸಮಯಾಧಾರಿತ ಯೋಜನಾ ಅನುಷ್ಠಾನವನ್ನು ಖಚಿತಪಡಿಸಲು ಸಂಬಂಧಿಸಿದ ಸಂಸ್ಥೆಯ ರೂ. 100/- ಛಾಪಾ ಕಾಗದದ ಮೇಲೆ ತೋಟಗಾರಿಕೆ ಇಲಾಖೆಯೊಡನೆ ಒಡಂಬಡಿಕೆ ಮಾಡಿಕೊಳ್ಳುವುದು.
- ಸಂಬಂಧಿತ ವ್ಯಕ್ತಿ / ಸಂಸ್ಥೆಯು ಈ ಸಹಾಯಧನವನ್ನು ಉಪಯೋಗಿಸಿ ಮಂಜೂರಾದ ಯೋಜನಾ ಪ್ರಸ್ತಾವನೆಯಂತೆ ಮೂಲಭೂತ ಸೌಕರ್ಯಗಳ ನಿರ್ಮಾಣ ಕೈಗೊಳ್ಳುವುದು ಹಾಗೂ ಸಂಬಂಧಿಸಿದ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರುಗಳಿಗೆ ಛಾಯಾ ಚಿತ್ರಗಳ ಸಮೇತ ಸಮಗ್ರ ವರದಿಯನ್ನು ಸಲ್ಲಿಸುವುದು.
- ಸಂಬಂಧಿಸಿದ ತಾಲ್ಲೂಕು / ಜಿಲ್ಲೆಯ ಅಧಿಕಾರಿಗಳು ಮೂಲಭೂತ ಸೌಕರ್ಯಗಳ ನಿರ್ಮಾಣದ ಅವಧಿಯಲ್ಲಿ ಸಂಬಂಧಿಸಿದ ಸಂಸ್ಥೆಯ ಘಟಕಗಳಿಗೆ ಭೇಟಿ ನೀಡಿ, ಪರಿಶೀಲಿಸಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವುದು.
- ಸಂಬಂಧಿತ ವ್ಯಕ್ತಿ / ಸಂಸ್ಥೆಗೆ ಸಹಾಯಧನವನ್ನು ಉದ್ದೇಶಿತ ಕಾರ್ಯಕ್ರಮಕ್ಕಾಗಿ ಬ್ಯಾಂಕ್ ನಲ್ಲಿ ತೆಗೆದುಕೊಂಡ ಸಾಲದ ಖಾತೆಗೆ ಜಮೆ ಮಾಡುವುದು.

**Indicative cost for the establishment of Seed Processing Infrastructure unit**

| Sl No. | Particulars | Amount (Rs. In lakhs) |
|---|---|---|
| 1 | Building includes, seed quality control lab, Office room, Processing unit, Godown, and Threshing yard | 100.00 |
| 2 | **Seed processing equipments** :Air screen cleaner, Special gravity separator / Spiral separator, Seed dressing unit. Weighing balance,Packaging machine, Dehumidifier, PH meter, Seed grader, heat sealer, Air conditioners (2 units with 1 cap, each), Bagging and sealing, desiccators, Digital temperature & humidity | 50.00 |

| | | |
|---|---|---|
| | indicator, Miscllaneous including other machines and equipments | |
| 3 | **Seed quality testing equipments :**<br><br>Seed sampling and dividers like seed tries, sample storage boses and racks, balances, purity board (5), Germinators (2), Refrigerator, Sand sterilizer, Hot air oven (2), Seed grinder, stereo binocular, Incubators, Auto clave, UV lamp, Electrophoresis unit, PCR unit, Gel documentation, Controlled seed storage, Thermometers / Temperature controlled centrifuge, Hygrometer, Power backing system, Computer with software and its accessories, Seed germination tables, purity working tables (5 Nos), Seed moisture meter, petri plates / plastic trays, Laboratory chemicals (as per requirement) Miscllaneous including other machines and equipments | 50.00 |
| | **Total** | **200.00** |

*ವಿ.ಸೂ. ಮೇಲೆ ತಿಳಿಸಿರುವ ಘಟಕಗಳ ಮೊತ್ತವು ಅಂದಾಜು ಮೊತ್ತವಾಗಿರುತ್ತದೆ.*

---

**ವಿ.ಸೂ. :**

- ತೋಟಗಾರಿಕೆ ಬೆಳೆಗಳ ಬೀಜೋತ್ಪಾದನೆ ಮತ್ತು ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ಸಹಾಯಧನ ಪಡೆಯುವ ಫಲಾನುಭವಿಗಳು ಇದೇ ಕಾರ್ಯಕ್ರಮಕ್ಕಾಗಿ ಇತರ ಯಾವುದೇ ಸಂಘ ಸಂಸ್ಥೆಯಿಂದಾಗಲೀ ಅಥವಾ ಸರ್ಕಾರದಿಂದಾಗಲೀ ಸಹಾಯಧನ ಪಡೆದಿಲ್ಲದಿರುವ ಬಗ್ಗೆ ಪ್ರಮಾಣಪತ್ರ ಸಲ್ಲಿಸಬೇಕು. ಸಹಾಯಧನ ಪಡೆದ ನಂತರ ಇದೇ ಕಾರ್ಯಕ್ರಮಕ್ಕಾಗಿ ಮತ್ತೆ ಇತರೆ ಯಾವ ಸಂಸ್ಥೆಯ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸುವಂತಿಲ್ಲ.
- ಈ ಕಾರ್ಯಕ್ರಮದಡಿ drying platforms, storage bins, packaging unit ಮತ್ತು ಸದರಿ ಘಟಕಕ್ಕೆ ಸಂಬಂಧಿಸಿದ ಉಪಕರಣಗಳು ಮುಂತಾದವುಗಳನ್ನು ಹೊಂದಿರಬೇಕು.
- ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಸಂಬಂಧಿಸಿದ ನಕ್ಷೆ ಹಾಗೂ ಅಂದಾಜು ಪಟ್ಟಿಯನ್ನು ಅಧಿಕೃತ ಪರವಾನಗಿ ಪಡೆದ ಇಂಜಿನಿಯರ್ ರವರಿಂದ ದೃಢೀಕರಣ ಮಾಡಿಸಿಕೊಂಡು ಅಳವಡಿಸುವುದು.
- ಈ ಘಟಕಗಳಿಗೆ ಸಂಬಂಧಿಸಿದಂತೆ ಜನವರಿ-2023 ರ ಮಾಹೆಯೊಳಗೆ ಪ್ರಸ್ತಾವನೆಗಳನ್ನು KSHMA ಕಛೇರಿಗೆ ಸಲ್ಲಿಸಲು ಕ್ರಮವಹಿಸುವುದು.

ಮಿಷನ್ ನಿರ್ದೇಶಕರು
ಮತ್ತು
ತೋಟಗಾರಿಕೆ ನಿರ್ದೇಶಕರು

214

## Seed Production - Check List

| | |
|---|---|
| 1 | Name and address of the organization |
| 2 | Location |
| 3 | Management |
| 4 | Name of the Project & brief background of the project |
| 5 | Promoters background |
| 6 | Category and Registration |
| 7 | Registration of the Unit, Registration Date and details of registration |
| 8 | Capacity of the unit |
| 9 | Objectives of the project |
| 10 | Justification |
| 11 | Details of infrastructure available |
| 12 | Facilities required |
| 13 | Details of investments proposed for consideration |

| Sl No. | Particulars | Amount (Rs. In lakhs) |
|---|---|---|
| 1 | Building includes, seed quality control lab, Office room, Processing unit, Gowdown, and Threshing yard | |
| 2 | Seed processing equipments | |
| 3. | Seed quality testing equipments | |

| | |
|---|---|
| 14 | Area of operation with special reference to National Horticulture Mission Districts to be covered. |
| 15 | Production of seeds per annum |

| | |
|---|---|
| 16 | Cost of Project |
| 17 | Means of Finance |
| 18 | Bank loan & Appraisal report |
| 19 | Details of cost of plant and machinery / equipment supported by quotations. |
| 20 | Plan and estimates of civil works |
| 21 | Availability of raw material |
| 22 | Back ward linkages with farmers. |
| 23 | No. of Farmers benefited |
| 24 | Forward linkages – analysis of domestic and export markets |
| 25 | Present position about land |
| 26 | Raw material mobilization, technology – process Specification, SWOT Analysis |
| 27 | Financial analysis – IRR, NPV, Cost benefit ratio, Breakeven point, DER, DSCR, projected balance sheet etc. |
| 28 | Implementation schedule |
| 29 | Certificate from pollution control department |
| 30 | Certificate regarding non-availing of subsidy from any other Central/state Govt. departments |
| 31 | Social benefits with special reference to employment generation |
| 32 | Draft MOU & Cost benefit ratio |
| 33 | Conclusion |
| 34 | Amount of subsidy sought. |